**ಓ.ಎಸ್.ನಂಃ 52/2020**

**ಡಿಡಬ್ಲ್ಯೂ-1**

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 27.10.2025 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ವಾದಿ ಪರ ವಕೀಲರಿಂದಃ</u>**

ನನ್ನ ತಂದೆ ಈ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ತಿಳಿದುಕೊಂಡಿಲ್ಲ. ಪ್ರಕರಣದ ಬಗ್ಗೆ ತಿಳಿದು ಸಾಕ್ಷ್ಯ ನುಡಿಯುತ್ತಿದ್ದೇನೆ. ನಾಗರಾಜಶೆಟ್ಟಿ ಈ ಪ್ರಕರಣದಲ್ಲಿ ಪಿಡಬ್ಲ್ಯೂ-2 ಆಗಿ ಸಾಕ್ಷ್ಯ ನುಡಿದಿದ್ದಾರೆ. ಸರ್ವೇ ನಂಃ 137 ರ ಪಶ್ಚಿಮಕ್ಕೆ ಕಾವೇರಯ್ಯರವರ ಜಮೀನು ಇದೆ ಎಂದರೆ ಸರಿ. ಎಂ.ನಾಗರಾಜು ಸದರಿ ಕಾವೇರಯ್ಯರವರ ಮೊಮ್ಮಗ ಎಂದರೆ ಸರಿ. ಎಂ.ನಾಗರಾಜು ಈ ಪ್ರಕರಣದಲ್ಲಿ ಪಿಡಬ್ಲ್ಯೂ-3 ಆಗಿ ಸಾಕ್ಷ್ಯ ನುಡಿದಿದ್ದಾರೆ ಎಂದರೆ ಸರಿ. ಪಿಡಬ್ಲ್ಯೂ-4 ಮಹದೇವಯ್ಯ ಸಜ್ಜಯ್ಯರವರ ಸ್ವತ್ತನ್ನು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಫ್ರಾಸ-2 ರಿಂದ 4 ರವರಿಗೂ ನಮಗೂ ಯಾವುದೆ ವೈಮನಸ್ಸು ಇಲ್ಲ. ನಮ್ಮ ಜಮೀನಿನ ಉತ್ತರಕ್ಕೆ ನಮ್ಮ ದೊಡ್ಡಪ್ಪ ಅಂಕಯ್ಯ ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. ಅಂಕಯ್ಯ ಈ ದಾವೆಯ ಎರಡನೇ ಪ್ರತಿವಾದಿ. ನನ್ನ ದೊಡ್ಡಪ್ಪ ಅಂಕಯ್ಯರವರಿಗೆ 30 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿ 18 ಗುಂಟೆ ಇದೆ ಎಂದು ನುಡಿಯುತ್ತಾರೆ. ನಮಗೂ ಸಹ 35 ಗುಂಟೆ ಇದೆ ಎಂದರೆ ಸಾಕ್ಷಿ 1 ಎಕರೆ 35 ಗುಂಟೆ ಇದೆ ಎಂದು ನುಡಿಯುತ್ತಾರೆ.

ನನಗೂ ಮತ್ತು ಎರಡನೇ ಪ್ರತಿವಾದಿಗೆ ತಲಾ 1 ಎಕರೆ 35 ಗುಂಟೆ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2019-20 ರ ಆರ್.ಟಿ.ಸಿ ಯಲ್ಲಿ ಹೊನ್ನಮ್ಮ, ಅಂಕಯ್ಯ, ಚಿಕ್ಕರಂಗಯ್ಯ, ರಂಗಯ್ಯ ಮತ್ತು ಗೋಪಾಲಯ್ಯರವರ ಹೆಸರು ಇದೆ ಎಂದರೆ ಸರಿ. ಸಾಕ್ಷಿ ಮುಂದುವೆರದು ನನ್ನ ತಂದೆಗೆ ಹೋತ್ತಿಲ್ಲದೆ ಅದನ್ನು ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನಿಗೆ ಹೊನ್ನಮ್ಮನಿಂದ ಸ್ವತ್ತುಗಳು ಬಂದಿವೆ ಎಂದರೆ ಸರಿ. 1998-99 ರಲ್ಲಿ ಹೊನ್ನಮ್ಮರವರ ಹೆಸರಿಗೆ 2 ಎಕರೆ 38 ಗುಂಟೆ ಖಾತಾ ಆಗಿದೆ ಎಂದರೆ ಸಾಕ್ಷಿ 1988 ರಲ್ಲೆ ಹಾಗಿದೆ ಎಂದು ನುಡಿಯುತ್ತಾರೆ. ಸರ್ವೇ ನಂಃ 137/1 ಕ್ಕೆ ಜಂಟಿ ಮಾಲೀಕತ್ವ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ

ವಿಭಾಗ ಪತ್ರ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತು. ಸದರಿ ವಿಭಾಗ ಪತ್ರದಲ್ಲಿ ವಾದಿಯ ಸ್ವತ್ತನ್ನು ಸೇರಿಸಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಸದರಿ ವಿಭಾಗ ಪತ್ರದ ಒಕ್ಕಣಿಕೆಗಳು ಎರಡನೇ ಪ್ರತಿವಾದಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ವಾದಿಯ ಪರ ಡಿಕ್ರಿ ಆದರೆ ನನಗೆ ತೊಂದರೆ ಹಾಗುವುದಿಲ್ಲ ಎಂದರೆ ಸರಿಯಲ್ಲ. 1ನೇ ವಾದಿ ಇಲಾಖೆಗೆ ಸೇರುವ ಮೊದಲೆ ಅವರ ತಂದೆ ಮತ್ತು ತಾತನ ಹೆಸರು ದಾಖಲೆಗಳಲ್ಲಿ ಯಾವ ಆದಾರದ ಮೇಲೆ ನಮೂದಾಗಿದೆ ಎಂದು ನನಗೆ ಗೊತ್ತಿಲ್ಲ. 1964 ರಲ್ಲೆ ನಿಪಿ12 ರಲ್ಲಿ ನಮೂದಿಸಿರುವಂತೆ ಗೋಪಾಲಯ್ಯರವರ ಹೆಸರು ಕಂದಾಯ ದಾಖಲೆಯಲ್ಲಿ ಬಂದಿದೆ ಎಂದರೆ ಸರಿಯಲ್ಲ. ನಿಪಿ6 ರ ವಿಭಾಗ ಪತ್ರದ ಆದಾರದ ಮೇಲೆ ನಮಗೆ 2 ಎಕರೆ 38 ಗುಂಟೆ ಬರಬೇಕು ಎಂದು ಕೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಿಪಿ6 ನ್ನು ಹೊರತುಪಡಿಸಿ ನಮ್ಮ ಬಳಿ ಬೇರೆ ದಾಖಲೆ ಇಲ್ಲ. 1ನೇ ವಾದಿಯ ತಂದೆ ಅವಿದ್ಯಾವಂತರು ಎಂದರೆ ನನಗೆ ಗೊತ್ತಿಲ್ಲ. ದಾವ ಸ್ವತ್ತಿನ ಮೇಲೆ ನನಗಾಗಲಿ ನನ್ನ ತಂದೆಗಾಗಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ